ಗಂಗಾ ಕಲ್ಯಾಣ ಯೋಜನೆ

೮೬೨. ಶ್ರೀಮತಿ ವೋಟೆಮ್ಮ (ಮೂಡಿಗೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಗಾ ಕಲ್ಯಾಣ ಯೋಜನೆಯ ರೂಪರೇಷೆಗಳೇನು ?

ಆ) ಈ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆ ಹಾಗೂ ಮೂಡಿಗೆರೆ ತಾಲ್ಲೂಕುಗಳಲ್ಲಿ ಎಷ್ಟು ಜನರಿಗೆ ಅನುಕೂಲ ಕಲ್ಪಿಸಲಾಗಿದೆ ?

ಇ) ಅನುಕೂಲ ಕಲ್ಪಿಸಿದವರ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಗಂಗಾಕಲ್ಯಾಣ ಯೋಜನೆಯು ತೆರೆದ ಬಾವಿ, ಕೊಳವೆ ಬಾವಿ ಹಾಗೂ ಹಳ್ಳಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಪ್ರತಿಯೊಂದು ಯೋಜನೆಯಿಂದ ಉಪಯೋಗ ಪಡೆಯುವ ಕನಿಷ್ಟ ಅಚ್ಚುಕಟ್ಟು ೧೫ ಎಕರೆಗಳಾಗಿರುತ್ತದೆ ಮತ್ತು ತಗಲುವ ವೆಚ್ಚವು ಎಕರೆಗೆ ರೂ. ೭೦೦೦ ರೂ. ಗಳನ್ನು ಮೀರಬಾರದೆಂ. ಈ ಯೋಜನೆಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಇತರ ಕೋಮುಗಳಿಗೆ ಪ್ರಯೋಜನವಾಗುವುದು. ಸದರಿ ಯೋಜನೆಯಲ್ಲಿ ಎರಡು ವರ್ಗಗಳಿವೆ. ಮೊದಲನೆಯ ವರ್ಗದಲ್ಲಿ ಒಟ್ಟು ಪ್ರಯೋಜನ ಪಡೆಯುವ ಜಮೀನಿನಲ್ಲಿ ಶೇಕಡ ೭೫ ಭಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು. ಮತ್ತು ಎರಡನೆಯ ವರ್ಗದಲ್ಲಿ ಹಿಂದುಳಿದ ವರ್ಗ ಹಾಗೂ ಇತರೆ ಕೋಮುಗಳಿಗೆ ಸೇರಿದ ಶೇಕಡ ೭೫ ಭಾಗದವರಿಗೆ ಪ್ರಯೋಜನ ಕಲ್ಪಿಸಲಾಗುವುದು.

ಆ) ಚಿಕ್ಕಮಗಳೂರು ಜಿಲ್ಲೆ ಹಾಗೂ ಮೂಡಿಗೆರೆ ತಾಲ್ಲೂಕುಗಳಲ್ಲಿ ಸದರಿ ಯೋಜನೆಯಡಿಯಲ್ಲಿ ಕ್ರಮವಾಗಿ ೩೬೯ ಹಾಗೂ ೧೦೭ ಕುಟುಂಬಗಳಿಗೆ ಅನುಕೂಲ ಕಲ್ಪಿಸಲಾಗಿದೆ.

ಇ) ಈ ಅನುಕೂಲ ಕಲ್ಪಿಸಿದವರ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕುಟುಂಬಗಳ ಸಂಖ್ಯೆಯು ಚಿಕ್ಕಮಗಳೂರು ಜಿಲ್ಲೆ ಹಾಗೂ ಮೂಡಿಗೆರೆ ತಾಲ್ಲೂಕುಗಳಲ್ಲಿ ಕ್ರಮವಾಗಿ ೧೯೩ ಹಾಗೂ ೬೭ ಇರುತ್ತದೆ.

ರಾಜ್ಯ ಸರ್ಕಾರದ ಹೆಲಿಕಾಪ್ಟರ್ ಮೂರಾಟ ಮಾಡುವ ಬಗ್ಗೆ

೬೬೫. ಎಂ. ನಾರಾಯಣಸ್ವಾಮಿ (ಬೈತವಂಗಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರದ ಬಳಿಯಿರುವ ಹೆಲಿಕಾಪ್ಟರನ್ನು ಯಾವಾಗ ಕೊಳ್ಳಲಾಯಿತು ? ಮತ್ತು ಎಷ್ಟು ಹಣಕ್ಕೆ ಕೊಳ್ಳಲಾಯಿತು ?

ಆ) ೧೯೮೮ ರಿಂದ ಇಲ್ಲಿಯವರೆಗೆ ಈ ಹೆಲಿಕಾಪ್ಟರಿನ ನಿರ್ವಹಣೆಗೆ ಸರಾಸರಿ ಪ್ರತಿ ತಿಂಗಳು ವೆಚ್ಚವಾದ ಹಣವೆಷ್ಟು ?

(ಚಾಲಕನ ಭತ್ಯೆ, ರಿಪೇರಿ, ಮತ್ತು ಇಂಧನದ ವೆಚ್ಚಗಳ ಬಗ್ಗೆ ಮಾಹಿತಿ ಕೊಡುವುದು)

ಇ) ಸರ್ಕಾರಕ್ಕೆ ಈ ಹೆಲಿಕಾಪ್ಟರಿನ ನಿರ್ವಹಣೆ ದುಬಾರಿಯಾಗಿದೆಯೆ ?

ಈ) ಹಾಗಿದ್ದಲ್ಲಿ ಈ ಹೆಲಿಕಾಪ್ಟರನ್ನು ಮಾರಲು ಯೋಚಿಸಿದೆಯೆ ? ಹಾಗಿದ್ದಲ್ಲಿ ಎಷ್ಟು ಮೊತ್ತಕ್ಕೆ ?

ಉ) ಈ ಹೆಲಿಕಾಪ್ಟರನ್ನು ಕೊಂಡುಕೊಳ್ಳಲು ಯಾರಾದರು ಮುಂದೆ ಬಂದಿದ್ದಾರೆಯೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ಬಳಿ ಇರುವ ಹೆಲಿಕಾಪ್ಟರನ್ನು ೩೦ನೇ ಅಕ್ಟೋಬರ್ ೧೯೮೯ ರಲ್ಲಿ ರೂ.೨೨,೩೨,೩೦೪ ರೂ.ಗಳ ವೆಚ್ಚದಲ್ಲಿ ಕೊಳ್ಳಲಾಯಿತು.